ವರ್ತನೆಗಳನ್ನು ನಾಟಕದಂತೆ ನೋಡುತ್ತ ನಗುವುದು. ಶಿಷ್ಟಾಚಾರದ ಪಾರ್ಟಿಯು ವಿಧಿಬದ್ಧ ಶಾಸ್ತ್ರದಂತೆ ಶುರುವಾಗುತ್ತದೆ. ಮೊದಲಿಗೆ ಆತಿಥೇಯನು ಸೀಸೆಯ ಕಿರೀಟದಂತಿರುವ ಮುಚ್ಚಳವನ್ನು ತೆರೆದು ಒಮ್ಮೆ ಅದರ ವಾಸನೆಯನ್ನು ನೋಡಬೇಕು. ವಾಸನೆಯಿಂದಲೇ ಪಾನದ ಹಳಮೆ, ಗುಣಮಟ್ಟ ಅರಿಯಬಲ್ಲ ಪರಿಣತರು ಇರುವರು. ಮದ್ಯದ ಹಳತನ ಎಷ್ಟು ಎಂಬುದರ ಮೇಲೆ ಗೋಷ್ಠಿಯ ಮಹತ್ವ ನಿರ್ಧಾರವಾಗುವುದುಂಟು. ಬಳಿಕ ಗಾಜಿನಬಟ್ಟಲುಗಳಿಗೆ ಸುರಿಯುವ ಕಾರ್ಯ. ಈ ಸುರಿತ ಕರಾರುವಾಕ್ಕಾಗಿರಬೇಕು. ಒಂದು ಹನಿ ಏರುಪೇರಾಗುವಂತಿಲ್ಲ. ಹಾಗೇನಾದರೂ ಆದರೆ, ನೆಟ್ಟಗಣ್ಣಿಂದ ವೀಕ್ಷಿಸುತ್ತಿರುವ ಪಾನಿಗಳು ಲೋಪವನ್ನು ಗಮನಕ್ಕೆ ತರುವರು. ಆಗ ಬಟ್ಟಲುಗಳನ್ನು ಕಣ್ಣನೇರಕ್ಕೆ ಎತ್ತಿಹಿಡಿದು ತೌಲನಿಕ ಅಧ್ಯಯನಮಾಡಿ, ಕಮ್ಮಿಯಿರುವ ಬಟ್ಟಲ ಕೊರತೆ ನೀಗಿಸಲಾಗುವುದು. ಮುಂದಿನದು, ಹೊಂಬಣ್ಣದ ವಿಸ್ಕಿಗೆ ತಕ್ಕಷ್ಟು ನೀರು ಅಥವಾ ಸೋಡ ಸುರಿದು, ಮಂಜುಗಡ್ಡೆಯ ತುಂಡು ತೇಲಿಬಿಡುವ ಕಾರ್ಯ. ಇವೆಲ್ಲವೂ ರಸವಿಜ್ಞಾನಿಯು ವಿವಿಧ ಆಮ್ಲಗಳನು ಗಾಜಿನ ನಳಿಕೆಯೊಳಗೆ ಸುರಿಯುತ್ತ ಮಾಡುವ ಪ್ರಯೋಗವನ್ನು ನೆನಪಿಸುವುದು. ಮದ್ಯ ತಯಾರಿಕೆಯ ಹಿಂದೆಯೂ ರಸಾಯನಶಾಸ್ತ್ರದ ಸಂಶೋಧನೆಯಿದೆ ತಾನೇ? ಪಾನಿಗಳು ಕನ್ನಡ ಸಿನಿಮಾಗಳ ದುರಂತ ನಾಯಕರಂತೆ ಗಟಗಟ ಸುರಿದುಕೊಳ್ಳುವಂತಿಲ್ಲ. ಎಲ್ಲರೂ ಏಕಕಾಲಕ್ಕೆ ಬಟ್ಟಲನೆತ್ತಿ ಝಣತ್ಕರಿಸುವಂತೆ ಪರಸ್ಪರ ತಾಗಿಸಿ, ಒಂದು ಸಿಪ್ಪನ್ನು ಹೀರಿ ಕೆಳಗಿಡಬೇಕು. ಆರಂಭದ ಘೋಷಣೆಗೆ ಮುನ್ನ ಕುಡಿವುದಾಗಲಿ ಮೊದಲ ಗುಕ್ಕಿಗೇ ಬಟ್ಟಲು ಬರಿದಾಗಿಸುವುದಾಗಲಿ ಸಲ್ಲ. ಕುಡಿವಲ್ಲೂ ಕ್ರಮವಿದೆ. ಕೆಲವೇ ಹನಿಗಳನ್ನು ಕೆಳದುಟಿ ಹಾಗೂ ಹಲ್ಲಸಂದಿಯ ನಡುವೆ ಬಿಟ್ಟುಕೊಂಡು, ಬಾಯಂಗಳದಲ್ಲಿ ಹರಿದಾಡಿಸುತ್ತ ಒಗರನ್ನು ಸಮಸ್ತ ರಸನೇಂದ್ರಿಯಗಳಿಗೆ ತಾಗಿಸಿ, ಅವು ತೃಪ್ತವಾದ ಬಳಿಕ ಗಂಟಲತ್ತ ಚಲಿಸಲು ಅನುಮತಿ ನೀಡಬೇಕು. ಎಮ್ಮೆ ಮುಸುರೆ ಹೀರುವಂತೆ ಕುಡಿಯುತ್ತಿದ್ದ ನಮಗೆ, ಪಾನಕಲೆಯನ್ನು ತಿಳಿಸಿಕೊಟ್ಟವರು ಒಬ್ಬ ಹಿರಿಯ ನವ್ಯಕವಿ. ಆಧುನಿಕ ಸಾಹಿತ್ಯದಲ್ಲಿ ನವ್ಯದವರು ಪಾನಪ್ರಿಯತೆಗೆ ಖ್ಯಾತರಾದವರು. ಒಬ್ಬರಂತೂ 'ಅಮಲಿನ ವಚನಗಳು' ಎಂಬ ಸಂಕಲನವನ್ನೇ ಪ್ರಕಟಿಸಿ ಪಾನಕ್ಕೆ ಅಕ್ಷರಸ್ಮಾರಕ ನಿರ್ಮಿಸಿದರು. ಕುಡಿತದ ಅನುಭವವನ್ನು ಕಲ್ಪಿಸಿಕೊಂಡು ಬರೆಯಲಾಗದು. ಸಾತ್ವಿಕರಾದ ಜಿ.ಪಿ. ರಾಜರತ್ನಂ ಕಲ್ಪನೆಯಲ್ಲಿ ಹುಟ್ಟಿದ ರತ್ನ 'ಹೆಂಡ ಹೆಂಡತಿ ಕನ್ನಡ ಪದಗೋಳ್' ತನಗೆ ಪ್ರಾಣಸಮಾನ ಎಂದು ಎಷ್ಟೇ ಬಜಾಯಿಸಲಿ, ಪಾನಾನುಭವದ ಸಹಜತೆ ನೈಜತೆ ಇರುವುದು ನವ್ಯಸಾಹಿತ್ಯದಲ್ಲಿ.

ಆಪ್ತರ ತಾತ್ಸಾರ, ಬಾಸಿನ ಕಿರುಕುಳ, ಗೆಳೆಯನ ವಿಶ್ವಾಸದ್ರೋಹ, ಪ್ರಿಯರ ಸಾವು, ತೀರಿಸಲಾಗದ ಸಾಲ – ಹೀಗೆ ನೂರುನೆಪಗಳು ಜನರನ್ನು ಪಾನಗೋಷ್ಠಿಗೆ ಸೆಳೆತರುತ್ತವೆ. ಎಂತಲೇ ಅವು ಭಾವಾಭಿವ್ಯಕ್ತಿಯ ಅಪೂರ್ವ ರಂಗಸಾಲೆಗಳು. ಪಾನಿಗಳು ಹೊಸಪಾತ್ರದೊಳಕ್ಕೆ ಹೊಕ್ಕು ತಮ್ಮ ವರ್ಣರಂಜಿತ ಪ್ರತಿಭೆ ಹೊಮ್ಮಿಸುವರು. ಕೆಲವರು ಮಂದಬೆಳಕಲ್ಲಿ ಕೂತು ಗ್ಲಾಸಿಗೆ ಅಧರವಿಟ್ಟು ತುಸುವೇ ಹೀರುತ್ತ, ನಶೆಯು ದೇಹವನ್ನು ಹಗುರಾಗಿಸುತ್ತ ಮೆದುಳಿಗೆ ಮೆತ್ತಿದ ಉಪಾಧಿಗಳನ್ನು ಕಳಚುತ್ತ ಇರಲು, ಯೋಗಿ ತುರಿಯಾವಸ್ಥೆಗೆ ಏರಿ ಅಲ್ಲೇ ಬಹುಕಾಲ ನೆಲೆಸಿಬಿಡುವರು. ಇನ್ನೂ ಕೆಲವರು ತಮ್ಮದೇ ಛಾಯೆಯನ್ನು ಎದುರುಪಾತ್ರವಾಗಿ ನಿಲ್ಲಿಸಿಕೊಂಡು ಅದರೊಡನೆ ಸಂಭಾಷಿಸುತ್ತ ಸ್ವಗತಾಭಿನಯಕ್ಕೆ ಇಳಿದುಬಿಡುವರು; ಕೆಲವರು ಗಂಭೀರ ಚರ್ಚೆ ಆರಂಭಿಸಿ ಒಳನೋಟ ಚೆಲ್ಲಾಡುವರು. ಕಾವ್ಯವನ್ನು ಪಾನದಷ್ಟೇ ಮತ್ತಿನ ವಸ್ತುವಾಗಿಸಿಕೊಂಡಿದ್ದ ಕಿರಂ ನಾಗರಾಜ, ಭಾವಾವೇಶಕ್ಕೆ ಒಳಗಾದಾಗ, ಮಾಟಗಾರನಂತೆ